# ವಾರ್ ಮ್ಯೂಸಿಯಂ



## ದೇಶಪ್ರೇಮ-ಶೌರ್ಯದ ನೆನಪುಗಳ ಪಿಸುಗುಡುವ ಮೊಗಸಾಲೆ

■ ಕಿರಣ ಭಟ್, ಹೊನ್ನಾವರ

'ನಮ್ಮ ರಾಷ್ಟ್ರಧ್ವಜ ಹಾರಾಡುತ್ತಿರುವುದು ಗಾಳಿಯ ಕಾರಣದಿಂದಲ್ಲ. ಅದರ ರಕ್ಷಣೆಗಾಗಿ ಕೊನೆಯುಸಿರಿನವರೆಗೂ ಪ್ರತಿ ಸೈನಿಕನೂ ಮಾಡಿದ ತ್ಯಾಗದಿಂದ...' ಜೈಸಲ್ಮೇರ್‌ನ 'ವಾರ್ ಮ್ಯೂಸಿಯಂ'ನಲ್ಲಿನ ದೊಡ್ಡ ಗೋಡೆ ಮೇಲೆ ಕಂಡ ಘೋಷವಾಕ್ಯವಿದು. ಈ ಮಾತುಗಳನ್ನು ಪುಷ್ಟೀಕರಿಸುವ ಹಾಗೆ, 'ವಾರ್ ಮ್ಯೂಸಿಯಂ' ಹೆಬ್ಬಾಗಿಲಿನ ಒಳಗೆ ಅಡಿಯಿಡುತ್ತಿದ್ದಂತೆ ಕಂಡಿದ್ದು ಎತ್ತರದ ಕಂಬದ ಮೇಲೆ ಪಟಪಟನೆ ಹಾರುತ್ತಿದ್ದ ರಾಷ್ಟ್ರಧ್ವಜ. ಹಿನ್ನೆಲೆಯಲ್ಲಿ ದೇಶಪ್ರೇಮದ ಹಾಡು, ದೇಶಾಭಿಮಾನ ತುಂಬುವ ವಾತಾವರಣ.

ರಾಜಸ್ಥಾನದ ಜೈಸಲ್ಮೇರ್‌ನಿಂದ ಜೋಧಪುರಕ್ಕೆ ಹೋಗುವ ಹಾದಿಯಲ್ಲಿ, ಸುಮಾರು 10 ಕಿ.ಮೀ. ದೂರದಲ್ಲಿದೆ ವಾರ್ ಮ್ಯೂಸಿಯಂ. 1965 ಮತ್ತು 1971ರ ಭಾರತ–ಪಾಕಿಸ್ತಾನ ಯುದ್ಧದಲ್ಲಿ ಭಾರತ ಸೇನೆ ತೋರಿದ ಅಪ್ರತಿಮ ಶೌರ್ಯ, ತ್ಯಾಗ ಮತ್ತು ಬಲಿದಾನದ ಸ್ಮರಣಾರ್ಥವಾಗಿ ಈ ಯುದ್ಧ ವಸ್ತು ಸಂಗ್ರಹಾಲಯವನ್ನು 2015ರಲ್ಲಿ ಸ್ಥಾಪಿಸಲಾಗಿದೆ.

ಈ ಮ್ಯೂಸಿಯಂ ವಿನ್ಯಾಸ ಮಾಡಿದವರು ಭಾರತೀಯ ವಿನ್ಯಾಸಕಾರ ಜಸಬೀರ್ ಸಿಂಗ್ ಸಾಷಿ. ಸುಮಾರು 15 ಎಕರೆ ವಿಸ್ತೀರ್ಣದಲ್ಲಿ ಹರಡಿರುವ ಈ ಸಂಗ್ರಹಾಲಯದಲ್ಲಿ ಎದ್ದು ಕಾಣುವಂಥದ್ದು 'ಗೌರವ ಗೋಡೆ'. ಈ ಗೋಡೆಯನ್ನು ಪರಮವೀರ ಚಕ್ರ ಮತ್ತು ಮಹಾವೀರ ಚಕ್ರ ಪಡೆದ ಯುದ್ಧವೀರರಿಗೆ ಅರ್ಪಿಸಲಾಗಿದೆ. ಅದರ ಆಚೀಚೆ ಎರಡು ವಿಶಾಲ ಪ್ರದರ್ಶನ ಕೊಠಡಿಗಳಿವೆ.

### ಲೋಂಗೇವಾಲಾ ಕದನ ಚಿತ್ರಣ

ಡಿಸೆಂಬರ್ 4, 1971ರಂದು ಪಾಕಿಸ್ತಾನದ ವಿರುದ್ಧ ಲೋಂಗೇವಾಲಾ ಕದನ ನಡೆದಿತ್ತು. ಆ ಕದನದಲ್ಲಿ ಉಪಯೋಗಿಸಿದ ಹಲವಾರು ಯುದ್ಧ ಸಾಮಗ್ರಿಗಳು, ಕಂಪಾಸ್, ಬೈನಾಕ್ಯುಲರ್, ಲ್ಯಾಂಪ್‌ಗಳು ಗಾಜಿನ



ರಾಜಸ್ಥಾನದ ಜೈಸಲ್ಮೇರ್‌ನಲ್ಲಿನ 'ವಾರ್ ಮ್ಯೂಸಿಯಂ', ಭಾರತೀಯ ಸೈನಿಕರ ಶೌರ್ಯ, ತ್ಯಾಗ–ಬಲಿದಾನವನ್ನು ಮನನ ಮಾಡಿಸುವ ಸಂಗ್ರಹಾಲಯ.



ಕಪಾಟುಗಳಲ್ಲಿ ಪ್ರದರ್ಶಿತವಾಗಿವೆ. ಯುದ್ಧಕ್ಕೆ ಸಂಬಂಧಿಸಿದ ಭಾವಚಿತ್ರಗಳನ್ನು ಗೋಡೆ ಮೇಲೆ ತೂಗು ಹಾಕಲಾಗಿದೆ. ಆ ಕದನದಲ್ಲಿ ಮುಖ್ಯ ಪಾತ್ರವಹಿಸಿದ್ದ 106 ಎಂಎಂ ಆರ್‌ಸಿಎಲ್ ಬಂದೂಕು ಇಲ್ಲಿ ಪ್ರದರ್ಶಿತವಾಗಿದೆ. ಈ ಬಂದೂಕು ಲೋಂಗೇವಾಲಾ ಕದನದಲ್ಲಿ ಮೊದಲ ಹಂತದ ದಾಳಿಯನ್ನು ತಡೆಯುವಲ್ಲಿ ಪ್ರಧಾನ ಪಾತ್ರ ವಹಿಸಿತ್ತು. ಎದೆಯುಬ್ಬಿಸಿ ನಿಂತ ಆಳೆತ್ತರದ ಭಾರತೀಯ ಸೈನಿಕರ ಕಂಚಿನ ಪ್ರತಿಮೆಗಳೂ ಇಲ್ಲಿವೆ.

### ಸಮರಾಂಗಣದ ಸನ್ನಿವೇಶಗಳು

1947–48, 1965 ಮತ್ತು 1999ರ ಕಾರ್ಗಿಲ್ ಕದನದಲ್ಲಿ ಪಾಕಿಸ್ತಾನದಿಂದ ವಶಪಡಿಸಿಕೊಂಡ ಹಲವಾರು ಯುದ್ಧೋಪಕರಣಗಳು ಇಲ್ಲಿವೆ. ಸಮರಾಂಗಣದ ಸನ್ನಿವೇಶಗಳನ್ನೂ ಸೈನಿಕರ ಪ್ರತಿಕೃತಿಗಳೊಂದಿಗೆ ನಿರ್ಮಾಣ ಮಾಡಲಾಗಿದೆ. ಪ್ರಕೃತಿ ವಿಕೋಪ ಸಂದರ್ಭದಲ್ಲಿ ಭಾರತೀಯ ಸೇನೆಯ ಸೇವೆಗಳ ವಿವರಗಳೂ ಇಲ್ಲಿ ಸ್ಥಾನ ಪಡೆದಿವೆ.

ವಿಸ್ತಾರವಾದ ಹೊರಾಂಗಣದಲ್ಲಿ ಯುದ್ಧ ವಾಹನಗಳನ್ನು ಪ್ರದರ್ಶನಕ್ಕಿಡಲಾಗಿದೆ. ವಿವಿಧ ಮಾದರಿಯ ಟ್ಯಾಂಕರ್‌ಗಳು, ವ್ಯಾನ್‌ಗಳು, ಟ್ರಕ್‌ಗಳು, ಸೈನಿಕರನ್ನು ಕೊಂಡೊಯ್ಯುವ ವಾಹನಗಳು, ಪಾಕಿಸ್ತಾನದಿಂದ ವಶಪಡಿಸಿಕೊಂಡ ಚೀನಾ ನಿರ್ಮಿತ T59 ಟ್ಯಾಂಕ್, ಲೋಂಗೇವಾಲಾ ಕದನದಲ್ಲಿ ಶತ್ರು ಟ್ಯಾಂಕ್‌ಗಳನ್ನು ಧ್ವಂಸ ಮಾಡಿದ ಹಂಟರ್ ಏರ್‌ಕ್ರಾಫ್ಟ್ ಮುಖ್ಯ ಆಕರ್ಷಣೆ. ಆಸಕ್ತಿಯುಳ್ಳವರು ಧ್ವನಿ ಬೆಳಕಿನ ಕೋಣೆಯಲ್ಲಿ ಕುಳಿತು ಯುದ್ಧದ ಕುರಿತ ಸಾಕ್ಷ್ಯಚಿತ್ರ ನೋಡಬಹುದು.

ರಾಜಸ್ಥಾನ ಪ್ರವಾಸದಲ್ಲಿರುವವರು ನೋಡಲೇಬೇಕಾದ ಅಭಿಮಾನದ ಸಂಗ್ರಹಾಲಯ, ಈ 'ವಾರ್ ಮ್ಯೂಸಿಯಂ'.

ಪ್ರತಿಕ್ರಿಯಿಸಿ: feedback@sudha.co.in